**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ನ್ಯಾಯಾಲಯ, ಕುಣಿಗಲ್.**

ಸಿ.ಸಿ.ನಂ.115/2024

ಪಿ.ಡಬ್ಲ್ಯೂ -04

ಸಿ.ಡಬ್ಲ್ಯೂ-06

ಸಾಕ್ಷಿದಾರನ ಹೆಸರುಃ- ಮಂಜುನಾಥ

ತಂದೆಯ ಹೆಸರುಃ- ನಂಜಪ್ಪ

ವಯಸ್ಸುಃ- 41 ವರ್ಷ

ಉದ್ಯೋಗಃ- ಹೆಚ್ ಸಿ

ವಾಸಃ- ಅಮೃತೂರು

**ಸಾಕ್ಷಿಗೆ ದಿಃ 24.02.2026 ರಂದು ಪ್ರಮಾಣ ವಚನ ಬೋದಿಸಲಾಯಿತು.**

**ಮುಖ್ಯ ವಿಚಾರಣೆಃ- ಮಾನ್ಯ ಸ.ಸ.ಅ ರವರಿಂದ.**

**2021** ರಿಂದ ಇಲ್ಲಿಯವರೆಗೆ ನಾನು ಅಮೃತೂರು ಪೋಲಿಸ ಠಾಣೆಯಲ್ಲಿ ಮುಖ್ಯ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ಅಮೃತೂರು ಠಾಣೆಯ ಅಪರಾದ ನಂ 160/2023 ಪ್ರಕರಣದಲ್ಲಿ ನಾನು ತನಿಖಾಧಿಕಾರಿಗೆ ತನಿಖಾ ಸಹಾಯಕನಾಗಿ ಕೆಲಸ ನಿರ್ವಹಿಸಿದ್ದು ದಿಃ 17.10.2023 ರಂದು ಚಾಸಾ 10 ಅವರು ನನ್ನನ್ನು ಘಟನಾ ಸ್ಥಳಕ್ಕೆ ಪಂಚನಾಮೆಗೆ ಕರೆದುಕೊಂಡು ಹೋಗಿದ್ದು ಸ್ಥಳದಲ್ಲಿ ಚಾಸಾ 1 ರಿಂದ 5 ಇದ್ದು ಚಾಸಾ 7 ಅವರ ವಾಸದ ಮನೆಯ ಬಳಿ ಚಾಸಾ 1 ಅವರು ಕರೆದುಕೊಂಡು ಹೋಗಿರುತ್ತಾರೆ. ಸ್ಥಳದಲ್ಲಿ ಡ್ಯೂಮೆಸ್ಟಿಕ್ ಗ್ಯಾಸ್ ಸಿಲಿಂಡರ ನಿಂದ ಕಮರ್ಷಿಯಲ್ ಸಿಲಿಂಡರಗೆ ರಿ ಫಿಲಿಂಗ್ ಅನ್ನು ಮಾಡುತ್ತಿರುತ್ತಾರೆ. ಸ್ಥಳದಲ್ಲಿ ಹೆಚ್.ಪಿ ಗ್ಯಾಸ್ ಕಂಪನಿಯ 1 ತುಂಬಿದ ಮತ್ತು 4 ಖಾಲಿ, ಭಾರತ ಗ್ಯಾಸ ಕಂಪನಿಯ 6 ಖಾಲಿ ಮತ್ತು 1 ಅರ್ಧ ಇರುವ ಸಿಲಿಂಡರ್ , 8 ಹೆಚ್.ಪಿ ಕಂಪನಿಯ ಕಮರ್ಶಿಯಲ್ ತುಂಬಿರುವ ಮತ್ತು 1 ಅರ್ಧ ಇದ್ದ ಸಿಲಿಂಡರ, ಒಂದು Electronic ತೂಕದ ಸ್ಕೇಲ್, ಗ್ಯಾಸ ರಿ ಫಿಲಿಂಗ್ ಮಾಡಲು ಬಳಸುವ ರಾಡ್ ಮತ್ತು 5 ಪ್ಲಾಸ್ಟಿಕ್ ಕ್ಯಾಪ್ ಗಳು ಇರುವುದನ್ನು ಕಂಡು ಬಂದಿರುತ್ತವೆ.

ಆರೋಪಿಯನ್ನು ವಿಚಾರಣೆ ಮಾಡಿರುತ್ತಾರೆ. ನಂತರ ಅವುಗಳನ್ನು ಪಂಚನಾಮೆಯ ಮೂಲಕ ಜಪ್ತು ಮಾಡಿಕೊಂಡಿದ್ದು ಆರೋಪಿಯನ್ನು ವಶಕ್ಕೆ ಪಡೆದಿರುತ್ತಾರೆ. ಚಾಸಾ 10 ಅವರ ಹೇಳಿಕೆ ಮೇರೆಗೆ ಪಂಚನಾಮೆಯನ್ನು ನಾನೇ ಟೈಪ್ ಮಾಡಿರುತ್ತೇನೆ. ಪಂಚನಾಮೆಯನ್ನು ಸಂಜೆ 6.30 ರಿಂದ 7.30 ರವರೆಗೆ ಮಾಡಿ ಮುಗಿಸಿರುತ್ತೇವೆ. ಆರೋಪಿಯನ್ನು ಮತ್ತು ಮು. ಮಾ. ಗಳನ್ನು ಗುರುತಿಸುತ್ತೇನೆ. ಪಂಚನಾಮೆಗೆ ನನ್ನ ಸಹಿ ಇರುತ್ತದೆ ಅದನ್ನು ನಿ.ಪಿ 2(ಡಿ) ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಆರೋಪಿಗಳ ಪರಃ ಟಿ.ಜಿ.ಟಿ. ವಕೀಲರಿಂದಃ**

ದಿಃ 17.10.2023 ರಂದು ನನ್ನ ಕರ್ತವ್ಯದ ಅವದಿ ಬೆಳಿಗ್ಗೆ 8 ರಿಂದ ಆರಂಭವಾಗಿದ್ದು ಮುಕ್ತಾಯದ ಅವದಿ ನಿಗದಿ ಆಗಿರುವುದಿಲ್ಲ. ಆ ದಿನ ನನ್ನನ್ನು ತನಿಖಾ ಸಹಾಯಕನಾಗಿ ನೇಮಕ ಮಾಡಿರುತ್ತಾರೆ. ಸದರಿ ವಿಚಾರವನ್ನು ಎಸ್.ಹಚ್ ಡೈರಿಯಲ್ಲಿ ನಮೂದು ಮಾಡಿರುತ್ತಾರೆ. ಸದರಿ ದಿನ 2 – 3 ಪ್ರಕರಣದಲ್ಲಿ ಸಹಾಯಕನಾಗಿ ಕೆಲಸ ನಿರ್ವಹಿಸಿರುತ್ತೇನೆ. ಆ ದಿನ ನಾನು ಬೇರೆ ಪ್ರಕರಣದ ನಿಮಿತ್ಯ ತನಿಖಾಧಿಕಾರಿ ಅವರೊಂದಿಗೆ ಸ್ಥಳಕ್ಕೆ ಹೋಗಿರುವುದಿಲ್ಲ.

ಈ ಪ್ರಕರಣ ಸಂಬಂದ ತನಿಖಾಧಿಕಾರಿಯವರಿಗೆ ಎಷ್ಟು ಗಂಟೆಗೆ ಮಾಹಿತಿ ಬಂದಿರುತ್ತದೆಂದು ನನಗೆ ಗೊತ್ತಿಲ್ಲ. ಚಾಸಾ 10 ಅವರೊಂದಿಗೆ ನಾನು 6.15 ಗಂಟೆಗೆ ಹೊರಟಿರುತ್ತೇನೆ. ನಾವು ನಮ್ಮ ಠಾಣೆಯಿಂದ ಹೊರಡುವಾಗ ಲ್ಯಾಪ್ ಟಾಪ್, ಮೊಬೈಲ್ , ಪ್ರಿಂಟರ್ ತಗೆದುಕೊಂಡು ಹೋಗಿರುತ್ತೇವೆ. ಸ್ಥಳಕ್ಕೆ ನಾನು ಚಾಸಾ 5 ಮತ್ತು 10 ಅವರು ಹೋಗಿರುತ್ತೇವೆ. ನಮಗೂ ಮೊದಲು Electronic ವಸ್ತುಗಳನ್ನು ಯಾರು ತಗೆದುಕೊಂಡು ಹೋಗಿರುವುದಿಲ್ಲ.

ಪಂಚರಿಗೆ ನೋಟಿಸನ್ನು ತನಿಖಾಧಿಕಾರಿ ಅಥವಾ ಮೇಲಾಧಿಕಾರಿ ನೀಡಬಹುದು ನನಗೆ ಗೊತ್ತಿಲ್ಲವೆಂದು ಹೇಳುತ್ತಾರೆ. ನಾನು ಸ್ಥಳಕ್ಕೆ ಹೋಗಲು 10 ನಿಮಿಷ ತಗೆದುಕೊಂಡಿರುತ್ತೇನೆ. ಚಾಸಾ 5 ಅವರು ನನ್ನನ್ನು ಸ್ಥಳಕ್ಕೆ ಕರೆದುಕೊಂಡು ಹೋಗಿರುತ್ತಾರೆ. ನಾವು ಹೋದಾಗ ನಮ್ಮ ವಾಹನವನ್ನು ಯಡಿಯೂರು ಜಲದಗೆರೆ ಸರ್ಕಲ್ ಬಳಿ ನಿಲ್ಲಿಸಿರುವುದಿಲ್ಲ ನೇರವಾಗಿ ಸ್ಥಳಕ್ಕೆ

ಹೋಗಿರುತ್ತೇವೆ. ಸ್ಥಳದಲ್ಲಿ 8 ರಿಂದ 10 ಜನ ಸ್ಥಳೀಯರು ಸೇರಿದ್ದರು. ಸ್ಥಳದಲ್ಲಿ ಪಂಚರಿಗೆ ಯಾವುದೆ ನೋಟಿಸ್ ನೀಡಿರುವುದಿಲ್ಲ ಮೊದಲೆ ನೀಡಿದ್ದು ಅವರು ನಾವು ಹೋದಾಗ ಸ್ಥಳದಲ್ಲಿ ಇದ್ದರು ಎಂದು ಹೇಳುತ್ತಾರೆ. ಮಹಜರನ್ನು ಮನೆಯ ಒಳಗೆಡ ಮತ್ತು ಹೊರಗಡೆ ಮಾಡಿರುತ್ತೇವೆಂದು ಹೇಳುತ್ತಾರೆ. ಈ ಬಗ್ಗೆ ಮಹಜರನಲ್ಲಿ ಮನೆಯ ಒಳಗಡೆ ಮಾಡಿದ ಬಗ್ಗೆ ನಮೂದು ಮಾಡಿಲ್ಲವೆಂದರೆ ಸಾಕ್ಷಿ ಚಾಸಾ 10 ಅವರು ಹೇಳಿದಂತೆ ಬರೆದಿರುತ್ತೇನೆಂದು ಹೇಳುತ್ತಾರೆ.

ಸ್ಥಳದಲ್ಲಿ  ಚಾಸಾ 1, 4 ಮತ್ತು 5 ಇದ್ದರು. ನಾವು ಆ ದಿನ ಒಂದೇ ಲ್ಯಾಪ ಟಾಪ್ ಮತ್ತು ಪ್ರಿಂಟರ್ ಅನ್ನು ತೆಗೆದುಕೊಂಡು ಹೋಗಿರುತ್ತೇವೆ. ಅವುಗಳನ್ನು ಠಾಣೆಯಿಂದ ನಾನು ಮತ್ತು ಚಾಸಾ 10 ಮಾತ್ರ ತಗೆದುಕೊಂಡು ಹೋಗಿರುತ್ತೇವೆ. ಘಟನಾ ಸ್ಥಳದ ಸುತ್ತ ಮನೆಗಳು ಯಾವವು ಇರುವುದಿಲ್ಲ ಖಾಲಿ ಸೈಟಗಳು ಇರುತ್ತವೆಂದು ಹೇಳುತ್ತಾರೆ. ಮಹಜರ ಸಮಯದಲ್ಲಿ ಎಲ್ಲಾ ಸಿಲಿಂಡರಗಳು ಇಟ್ಟು ಪೋಟೋ ತಗೆದಿರುತ್ತಾರೆ. ಎಷ್ಟು ಪೋಟೋ ತೆಗೆದಿರುತ್ತಾರೆಂದು ನನಗೆ ಗೊತ್ತಿಲ್ಲ.

ನಾನು ಹೇಳಿರುವ ಮಹಜರನಲ್ಲಿ ಅರ್ಧ ಸಿಲಿಂಡರ ಇರುವ ಬಗ್ಗೆ ಯಾವ ಆಧಾರದ ಮೇಲೆ ಬರೆದಿರುತ್ತಾರೆಂದು ನನಗೆ ಗೊತ್ತಿಲ್ಲ. ಮಹಜರ ಮಾಡಿದ ಸ್ಥಳ ಮನೆಯ ಕಿಡಕಿ ಯಾವ ದಿಕ್ಕಿಗೆ ಇತ್ತು ಎಂದು ನಾನು ನೋಡಿರುವುದಿಲ್ಲ. ನಮ್ಮ ಮೇಲಾಧಿಕಾರಿಗಳ ಮಾತು ಕೇಳಿ ಮಹಜರಗೆ ನಾನು ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಟೈಪ್ ಮಾಡಿ ಸಹಿ ಮಾಡು ಎಂದು ಹೇಳಿದ್ದಕ್ಕೆ ಮಾಡಿರುತ್ತೇನೆಂದು ಹೇಳುತ್ತಾರೆ.

ಮಹಜರನಲ್ಲಿ ಹೇಳಿರುವಂತೆ 2 ಮನೆಗಳು ಪಾಳು ಬಿದಿದ್ದವಾ ಎಂದರೆ ಸಾಕ್ಷಿ 2 ಒಂದಕ್ಕೊಂದು ಹೊಂದಿಕೊಂಡಿದ್ದವು ಎಂದು ಹೇಳುತ್ತಾರೆ. ಪಾಳು ಬಿದ್ದ ಮನೆಯಲ್ಲಿ ಬಾಗಿಲು ಇದ್ದ ಬಗ್ಗೆ ನಾನು ಗಮನಿಸಿರುವುದಿಲ್ಲ. ನಾನು ಯಾವುದೇ ರೀತಿಯ ಸ್ಥಳಕ್ಕೆ ಹೋಗಿಲ್ಲ ಚಾಸಾ 10 ಅವರ ಹೇಳಿಕೆ ಮೇರೆಗೆ ಠಾಣೆಯಲ್ಲಿ ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

ಘಟನಾ ಸ್ಥಳದಲ್ಲಿದ್ದ ಮನೆ ಎಷ್ಟು ರಕ್ಕೆಯ ಬಾಗಿಲು ಇತ್ತು ಎಂದು ನಾನು ಗಮನಿಸಿರುವುದಿಲ್ಲ. ಮನೆಗೆ ಎಷ್ಟು ಕಿಡಕಿಗಳು ಇರುತ್ತವೆಂದು ನಾನು ಗಮನಿಸಿರುವುದಿಲ್ಲ. ಸ್ಥಳದಲ್ಲಿ ಮಹಜರಗೆ ಸ್ಥಳೀಯರ ಸಾಕ್ಷಿದಾರರ ಸಹಿ ಪಡೆದಿರುವುದನ್ನು ನಾನು ಗಮನಿಸಿರುವುದಿಲ್ಲ. ನಮ್ಮ ಠಾಣೆಯಿಂದ ಘಟನಾ ಸ್ಥಳ 18 ರಿಂದ 20 ಕೀ ಮೀ ದೂರ ಎಂದರೆ ಸಾಕ್ಷಿ 15 ಕೀ ಮೀ ದೂರ ಇರುತ್ತದೆಂದು ಹೇಳುತ್ತಾರೆ. ನಾನು ಸ್ಥಳಕ್ಕೆ ಹೋಗಿಲ್ಲ, ಮಹಜರ ಬರೆದಿರುವುದಿಲ್ಲ ಠಾಣೆಯಲ್ಲಿಯೇ ಅದನ್ನು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಮು. ಮಾ. ಗಳನ್ನು ಜಪ್ತು ಮಾಡಿಕೊಂಡಿಲ್ಲವೆಂದರೆ ಸರಿಯಲ್ಲ. ಮೇಲಾಧಿಕಾರಿಗಳ ಮಾತು ಕೇಳಿ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗೂ ಈ ಪ್ರಕರಣಕ್ಕೂ ಯಾವುದೇ ಸಂಬಂದ ಇಲ್ಲವೆಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲಃ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ.

ಸಹಿ/-

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.

ಕುಣಿಗಲ್.